Advanced International Journal for Research (AIJFR)
E-ISSN: 3048-7641 ● Website: www.aijfr.com ● Email: editor@aijfr.com

ಬೀಸುಕಲ್ಲಿನಪದ ಮತ್ತು ತವರುಮನೆ

ಡಾ.ಮುಮ್ತಾಜ್ ಬೇಗಂ. ಗಂಗಾವತಿ

ಸಹ ಪ್ರಾಧ್ಯಾಪಕರು ಮತ್ತು ಸಂಯೋಜಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ
ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಂಗಾವತಿ, ಜಿ:ಕೊಪ್ಪಳ

ಆಧುನಿಕತೆಯ ಭರಾಟೆಯ ಸೊಂಕಿಲ್ಲದ ಕಾಲದಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳು ದಿನನಿತ್ಯದ ಕಾಯಕವನ್ನು ಬೀಸುವ ಕಾರ್ಯದಿಂದ ಆರಂಭಿಸುತ್ತಿದ್ದರು. ಬದುಕಿನ ಬವಣೆ ಕಷ್ಟ ಸುಖಗಳ ಭಾರವನ್ನು ಇಳಿಸಿಕೊಳ್ಳಲು ಒಂದು ಮಾಧ್ಯಮವಾಗಿತ್ತು. ತನ್ನೊಳಗಿನ ನೋವನ್ನು ಹೆಣ್ಣು ಯಾರ ಹತ್ತಿರವು ಹೇಳಿಕೊಳ್ಳಲಾರಳು. ಅಸಹಾಯಕ ಸ್ಥಿತಿಯಲ್ಲಿ ಗಟ್ಟಿಯಾದ ಕಲ್ಲನ್ನು ತಿರುಗಿಸುವುದರೊಂದಿಗೆ ಹಾಡನ್ನು ನೀವೆದಿಸಿಕೊಳ್ಳುವಂತೆ ತೋರುತ್ತದೆ.

ಹಿಂದಿನ ಕಾಲದಲ್ಲಿ ಕೋಲಾಟ ಬೇರೆ ಪ್ರಕಾರದ ಹಾಡುಗಳನ್ನು ಹಾಡಲು ಬರದ ಗಂಡು ಮಕ್ಕಳು ಸಿಗುತ್ತಿದ್ದರು. ಆದರೆ ಬೀಸುವ, ಕುಟ್ಟುವ ಹಾಡು ಹಾಡದ ಹೆಣ್ಣು ಮಕ್ಕಳಿರದ ಹಳ್ಳಿಯೇ ಸಿಕ್ಕುತ್ತಿರಲಿಲ್ಲ. ಪ್ರತಿಯೊಂದು ಮನೆಯಲ್ಲೂ ಬೀಸುವ ಕಲ್ಲು ಇದ್ದೆ ಇರುತ್ತಿತ್ತು. ಏಕೆಂದರೆ ಆಧುನಿಕ ಜಾಗತಿಕರಣಕ್ಕೆ ಇನ್ನೂ ಅಂದಿನ ಹಳ್ಳಿಗಳು ಒಳಗಾಗದೇ ಇದ್ದ ಸಂದರ್ಭದಲ್ಲಿ ಬೀಸುವ ಕಲ್ಲುಗಳೇ ಜೋಳ, ರಾಗಿ ಮುಂತಾದ ಧಾನ್ಯಗಳನ್ನು ಹಿಟ್ಟು ಮಾಡುವ ಉಪಕರಣವಾಗಿತ್ತು. ಆಧುನಿಕತೆಯಲ್ಲಿರುವ ಮಿಕ್ಸರ್, ಗ್ರ್ಯಾಂಡರ್ ಇರಲಿಲ್ಲ. ಆದರೂ ಇಂದಿಗೂ ಮನೆಗಳಲ್ಲಿ ಬೀಸುವ ಕಲ್ಲು ಪಳೆಯುಳಿಕೆಯ ರೀತಿಯಲ್ಲಿ ನಮ್ಮೊಂದಿಗೆ ಬದುಕುತ್ತಿರುವುದನ್ನು ಕಾಣುತ್ತೆವೆ. ಧಾನ್ಯಗಳನ್ನು ಬೀಸುವಾಗಲೆಲ್ಲಾ ಬೀಸುವ ಪದಗಳು ಕೇಳಿ ಬರುತ್ತಿದ್ದವು.

ಗ್ರಾಮ್ಯ ಭಾಗದಲ್ಲಿ ಹೆಣ್ಣಿನ ಕೇಲಸಕಾರ್ಯಗಳು ಪ್ರಾರಂಭವಾಗುವುದೇ ಬೆಳಗಿನ ಜಾವ ಮೂರರಿಂದ ನಾಲ್ಕು ಗಂಟೆಯ ಹೊತ್ತಿಗೆ ನಿಸರ್ಗದಲ್ಲಿ ಕತ್ತಲನ್ನು ಹರಿದು ಬೆಳಗಾಗುವ ಎಲ್ಲಾ ಪ್ರಕ್ರಿಯೆಗಳು ಕ್ರಿಯಾಶೀಲತೆಯಿಂದ ನಡೆಯುತ್ತಿರುವ ಸಮಯ ತಂಗಾಳಿಯ ವೇಳೆಯಲ್ಲಿ ಎಚ್ಚರಗೊಂಡರೆ ಕೀವಿಗೆ ಕೇಳಿಸುವುದು ಹಳ್ಳಿಯ ಹಲವು ಕಡೆ ತಂಗಾಳಿ ಮೇಲೆ ಮಂಜುಳನಾದ ಅಲೆಅಲೆಯಾಗಿ ತೇಲಿಬಂದು ಕೀವಿಗೆ ಕೇಳಿಸುತ್ತದೆ. ಹಕ್ಕಿಗಳಿಗೂ ಇನ್ನೂ ನಿದ್ದೆ ಮಂಪರಿನಲ್ಲಿರುವಾಗಲೇ ನಮ್ಮ ಜನಪದ ಹೆಣ್ಣು ಮಕ್ಕಳ ಉದಯರಾಗವೇ ರಾಗಿ ಬೀಸುವ ಹಾಡಿನ ಧ್ವನಿಯಾಗಿದೆ.

ಜನಪದ ಹೆಣ್ಣುಮಕ್ಕಳು ಹಾಡುವ ಹಾಡಿಗೆ ಗರಗರನೆ ಬೀಸುವ ಕಲ್ಲಿನ ಸದ್ದೇ ಶ್ರುತಿ. ಫಲ್ ಫಲ್ ಎಂದು ಉಲಿಯುವ ಕೈ ಬಳೆಗಳೆ ಸದ್ದೇ ತಾಳ. ಈ ಶೃತಿ, ತಾಳ, ನಾದಗಳ ಮೇಳವಿಂದ ಹಾಡಿಗೆ ಅದ್ಭುತ ಸಂಗೀತದ ಕಳೆ ಮೂಡಿ ಬರುತ್ತದೆ. ಒಬ್ಬರ ದನಿಗೆ ಮತ್ತೊಬ್ಬರ ಮರುದನಿ ಕೊಡುತ್ತ ದನಿಯನ್ನು ಏರಿಸುತ್ತ ಇಳಿಸುತ್ತ ಸಡಗರದಿಂದ ಹುರುಪಿನಿಂದ ಹಾಡುವ ಅವರ ಪದಗಳಲ್ಲಿ ಸಹಜವಾದ ಒಂದು ಸೊಬಗು ಕಂಡುಬರುತ್ತದೆ. ಸರಳತೆಯ ನಿರಾಢಂಬರದ ಹಾಡುಗಳು ಮನಸ್ಸಿಗೆ ಹಿತ ನೀಡುವಂತವುಗಳಾಗಿವೆ. ಬದುಕಿನ ಅನೇಕ ಸಮಸ್ಯೆಗಳನ್ನು ಸಂಕಟಗಳನ್ನು ಎದುರಿಸಿ ಮಸೆದು ಮತ್ತಷ್ಟು ಹದಗೊಳ್ಳುವುದು ಬೀಸುವ ಕಲ್ಲನ್ನು ಬೀಸುತ್ತಾ ಹಾಡುವವರೆಲ್ಲಾ ಹೆಣ್ಣು ಮಕ್ಕಳೆ. ಆದರೆ ಅಪರೂಪದಲ್ಲಿ ಅಪರೂಪಕ್ಕೊಮ್ಮೆ ಗಂಡಸರು ಈ ಬೀಸುವ ಕ್ರಿಯೆಯಲ್ಲಿ ಭಾಗಿಯಾಗುತ್ತಿದ್ದರು.

ಬೀಸುವಾಗ ಹೇಳುವ ಈ 'ರಾಗಿಕಲ್ಲು' ಅಥವಾ ಬೀಸುವ ಪದಗಳನ್ನು ಕಟ್ಟಿದವರಲ್ಲಿ ನೂರಕ್ಕ ತ್ಹೊಂಭತ್ತು ಜನ ಹೆಣ್ಣು ಮಕ್ಕಳೆಂದೇ ತೋರುತ್ತದೆ. ಈ ಪದಗಳನ್ನ ಒಳಹೊಕ್ಕು ನೋಡಿದರೆ ಅವುಗಳ ಪದ, ಶೈಲಿ, ಭಾವಗಳನ್ನು ಪರೀಕ್ಷಿಸಿದರೆ ಈ ಊಹೆ ಸರಿ ಎನ್ನಿಸುತ್ತದೆ. ಈ ಹಾಡುಗಳಲ್ಲಿ ತವರು ಮನೆಯ ಮಮತೆ, ಅಣ್ಣ–ತಮ್ಮ–ಅಕ್ಕ–ತಂಗಿದ ಪ್ರೀತಿ, ಗಂಡನ ಒಲವು, ಮಕ್ಕಳ ಮುದ್ದು, ಅತ್ತೆ, ಅತ್ತಿಗೆ, ನಾದಿನಿ ಮೊದಲಾದವರ ಹಲವು ತೆರದ ನಡವಳಿಕೆಗಳು ಇವೇ ಮೊದಲಾದ ಹೆಣ್ಣಿನ ಜೀವನಕ್ಕೆ ನೇರವಾಗಿ ಸಂಬಂಧಿಸಿದ ಚಿತ್ರಗಳೇ ಹೆಚ್ಚು. ಬೀಸುವ ಹೆಂಗಸರು ತಮ್ಮ ಬಾಳಿನ ಸಿಹಿ–ಕಹಿ ಅನುಭವಗಳನ್ನೆಲ್ಲ ಉಕ್ಕಿ ಬಂದಾಗ ಹಾಡಿನ ಮೂಲಕ ಹೊರ ಹಾಕಿ ಮನಸ್ಸು ಹಗುರ ಮಾಡಿಕೊಂಡಿದ್ದಾರೆ. ಬೇರೆ ರೀತಿಯಲ್ಲಿ ಹೊರಪಡಿಸಲು ಅವಕಾಶವಿಲ್ಲದಾಗ ತಮ್ಮ ಮನೋಭಾವಗಳನ್ನು ಸುಖ ದುಃಖಗಳನ್ನೂ ಆಸೆ, ಭಯಗಳನ್ನೂ ಪದ ಕಟ್ಟಿ ಹೇಳಿ ಕೊಂಡಿದ್ದಾರೆ. ಬಾಳಿನಲ್ಲಿ ತಾವು ನಡೆದ ಮತ್ತು ನಡೆಯಬೇಕಾದ ದಾರಿಯನ್ನು ಗುರುತಿಸಿಕೊಂಡಿದ್ದಾರೆ. "ಆತ್ಮ ಕಲ್ಯಾಣಕ್ಕಾಗಿ ದೇವರನ್ನು, ಆತ್ಮ ಸಂತೋಷಕ್ಕಾಗಿ ಹಾಡಿಕೊಂಡಿದ್ದಾರೆ"1 ಹೀಗೆ ಹಾಡುವ ನಾದ ಕಿವಿ ತುಂಬಲು ತಲೆ ಹಾಕಿ ಹಾಕಿ ಗತ್ತಿನೊಡನೆ ರಾಗವೆತ್ತಿ ಪ್ರಾರಂಭಿಸಿದಳೆಂದರೆ ಅವಳಿಗೆ ಬೇರಾವ ಸಂಗತಿಯ ನೆನಪು ಬಾರದು. ಪ್ರಪಂಚದ ಪರಿವೇ ಇಲ್ಲದೇ ತಲ್ಲೀನಳಾಗಿ ತನ್ನನ್ನು ತಾನೆ ಮರೆಯುವಳು.

"ಕುಟ್ಟುವಾಗ, ಬೀಸುವಾಗ ಅಥವಾ ಇತರೆ ಕಾರ್ಯಗಳನ್ನು ಮಾಡುವಾಗ ಜನಪದರು ಕೆಲವು ದೇಸಿ ಮಟ್ಟಿನ ಹಾಡುಗಳನ್ನು ಹೇಳುತ್ತಿರುವುದು ಸ್ಪಷ್ಟವಾಗಿದೆ. ಇನ್ನು ಜನಪದ ಕ್ರಿಯೆಗಳಿಗೂ ಮತ್ತು ಜನಪದ ಹಾಡುಗಳಿಗೂ ಇರುವ ಒಂದು ಸಂರಚನಾತ್ಮಕ ಸ್ವರೂಪವನ್ನು ಅವುಗಳ ಪರಸ್ಪರ ಆಂತರಿಕ ಸಂಬಂಧದ ಸೂಷ್ಮಾಂಶಗಳನ್ನು ಗುರುತಿಸುವುದು ಮುಖ್ಯ. ಆಗ ಕ್ರಿಯೆ ಮತ್ತು ಹಾಡುಗಳ ಒಂದು ಸಾವಯವ ಸೂತ್ರ ತಂತಾನೇ ರೂಪಗೊಳ್ಳುತ್ತದೆ.

ಆದಿಮ ಗುಂಪುಗಳ ಅನೇ ಕ್ರಿಯೆಗಳಲ್ಲಿ ಅವರ ನಿತ್ಯದ ಜೀವನ ನಿರ್ವಹಣೆಗೆ ಸಂಬಂಧಿಸಿದ ಕೆಲವು ಮೂಲ ಕ್ರಿಯೆಗಳನ್ನು ಈ ನಿಟ್ಟಿನಲ್ಲಿ ವಿವೇಚನೆಗೆ ಎತ್ತಿಕೊಳ್ಳಬಹುದು.2 ಆದ್ದರಿಂದ ಜನಪದ ಹೆಣ್ಣು ಈ ಬಗೆಯ ಕ್ರಿಯೆಯನ್ನು ಸಹಜವೆನ್ನುವಂತೆ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾಳೆ. ತವರು ಮನೆಯಲ್ಲಿ ಸುಖವಾಗಿ ಬೆಳೆದ ಹೆಣ್ಣು ಮಗಳಿಗೆ ಗಂಡನ ಮನೆಯಲ್ಲಿ ಜವಾಬ್ದಾರಿಗಳು ಸಹಜವಾಗಿ ಹೆಚ್ಚಾಗಿರುತ್ತವೆ. ಆಗ ಗಂಡನ ಮನೆಯಲ್ಲಾಗುವ ಏರು-ಪೇರುಗಳು, ಸಂಬಂಧಗಳ ಹೊಂದಾಣಿಕೆಯಲ್ಲಿ ಉಂಟಾಗುವ ತೊಂದರೆಗಳು, ಅತಿಯಾದ ಶ್ರಮಭರಿತ ಕೆಲಸಗಳು ಹೀಗೆ ವಿಭಿನ್ನ ಸಂದರ್ಭಗಳಲ್ಲಿ ಇಂಥ ಹಾಡುಗಳು ಸೃಷ್ಟಿಗೊಂಡವು. ಶ್ರಮ ಸಂಸ್ಕೃತಿಯ ಪಾಲುದಾರಿಕೆಯ ವಿಧಾನದ ಮೇಲೆ ವಿಭಜನೆಗೊಂಡ ಹಿನ್ನೆಲೆಯಲ್ಲಿ ಹೆಣ್ಣಿನ ದುಡಿಮೆಗಳಲ್ಲಿ ಬೀಸುವ ಕುಟ್ಟುವ ಕಾಯಕವು ಒಂದಾಗಿತ್ತು. ಗ್ರಾಮ್ಯ ಭಾಗದ ಜನಪದ ಹೆಣ್ಣಿನ ಕೆಲಸ ಕಾರ್ಯಗಳು ಹಿಟ್ಟು ಬೀಸುವ ಕೆಲಸದಿಂದ ಪ್ರಾರಂಭವಾಗುತ್ತಿತ್ತು. ತನ್ನ ದುಮ್ಮಾನಗಳ ಅಭಿವ್ಯಕ್ತಿಗೆ, ನೋವು ನಲಿವುಗಳನ್ನು ಮನದಾಳದಿಂದ ಮೂಡಿಬರಲು ಬೀಸುವ ಸಮಯ ಸೂಕ್ತವಾಗಿತ್ತು. ಬೀಸುತ್ತ ಹಾಡುವ ಮೂಲಕ ನೋವನ್ನು ಮರೆಯಲು, ಶ್ರಮವನ್ನು ಸರಳೀಕರಣಗೊಳಿಸಿಕೊಳ್ಳಲು ಹೆಣ್ಣು ಇಂಥ ಸಂದರ್ಭಗಳನ್ನು ಬಳಸಿಕೊಳ್ಳುತ್ತಿದ್ದಳು.

ಬೀಸುವ ಕಲ್ಲನ್ನು ದೇವರ ಸ್ತುತಿಯೊಂದಿಗೆ ಪ್ರಾರಂಭಿಸುವುದು ವಾಡಿಕೆ ಬೀಸುವ ಕಲ್ಲನ್ನು ತರುವ ಅದರ ಅಂದವನ್ನು ಹೊಗಳುವ ಅವರ ಅಭಿವ್ಯಕ್ತಿ ವಿಧಾನವೇ ಅದ್ಭುತವಾದುದು ಹೀಗೆ ಜನಪದ ಹೆಣ್ಣು ಮಕ್ಕಳು ಬೀಸುವ ಪದ ಪ್ರಾರಂಭಿಸುತ್ತಿದ್ದರು.

"ಬೀಸೋ ಕಲ್ಲಿಗೆ ರಾಜ್ಯವ ತಿರುಗ್ಯಾರೆ
ರಾಯ ಸಂಪನ್ನರ ಮಗಳಿಗೆ
ರಾಯ ಸಂಪನ್ನರ ಮಗಳು ನೀಲಮ್ಮಗೆ
ರಾಜ್ಯ ತಿರುಗ್ಯಾರೆ ಬಸವಯ"

ಬೀಸುವ ಕಲ್ಲು ಅಂದಿನ ಜನಸಮೂಹ ಬದುಕಿನ ಭಾಗವೇ ಆಗಿತ್ತು ಎಂಬುದು ತಿಳಿಸುತ್ತದೆ. ದೇವಾನು ದೇವತೆಗಳ ಅನುಗ್ರಹ ನಮ್ಮ ಮೇಲಿರಬೇಕು ಎನ್ನುವ ಗರತಿ ಬೀಸುವ ಹಾಡುಗಳಲ್ಲಿ ದೇವರ ಸ್ಮರಣೆ ಮಾಡುವುದನ್ನು ಮರೆಯುವುದಿಲ್ಲ.

ಅಷ್ಟದ ಮ್ಯಾಗಳ ಪುಟ್ಟಂಚಿನ ಗರಸಿಯ
ಅಕ್ಕಯ್ತುಂದಿಡೆ ನಡು ಮನೆಗೆ
ಅಕ್ಕಯ್ಯ ತಂದಿಡೆ ನಡುಮನೆಗೆ ನಾವಿಬ್ಬರೂ
ಮುಕ್ಕಣ್ಣೀಶ್ವರನ ನೆನೆದೇವು

ಇಲ್ಲಿ ಜನಪದ ಹೆಣ್ಣು ಕೇವಲ ದೇವರನ್ನಷ್ಟೇ ನೆನೆಯುವುದಿಲ್ಲ. ತನ್ನ ಸುತ್ತ ಮುತ್ತಲಿನ ಮನುಷ್ಯರನ್ನು, ಒಳ್ಳೆಯವರನ್ನು, ಹಿರಿಯ ಕಿರಿಯರನ್ನು ನೆನೆಯುವ ಪ್ರಕ್ರಿಯೆ ಮನುಷ್ಯನನ್ನ ಕ್ರಿಯಾಶೀಲವಾಗಿ ಇಡಬಲ್ಲದು.

ದೊಡ್ಡನೇ ಕಲ್ಲೂಡಿ ದೊಡ್ಡೋರ ನೆನೆದೆವು
ದೊಡ್ಡ ಗ್ರಾಮದ ಗರತಿ(ಯ)/ ಲಕ್ಕಮ್ಮನ
ದೊಡ್ಡ ಕಲ್ ಹೂಡಿ ನೆನೆದೆವು

ಶಿವ, ಪಾರ್ವತಿ, ಸರಸ್ವತಿ ಹೀಗೆ ದೇವರುಗಳ ನೆನೆಯುವುದರೊಂದಿಗೆ ಸಾಮಾನ್ಯ ಗರತಿಯನ್ನು ಎದುರುಗೊಳಿಸುವ ಅನುಸಂಧಾನದ ಕಾರ್ಯವನ್ನು ಜನಪದರು ಮಾಡಿರುವುದನ್ನು ಕಾಣುತ್ತೇವೆ. ಅಲ್ಲದೇ ಮಾನವ ಸಂಬಂಧಗಳ ಹೊಂದಾಣಿಕೆ ಹೇಗಿರಬೇಕೆಂದರೆ ಬೀಸುವ ಕಲ್ಲಿನ ಅಡಿಯಲ್ಲು ಮೇಗಲ್ಲು ಒಂದಕ್ಕೊಂದು ಸಂಘರ್ಷಿಸಿದರೂ ಆ ಸಂಘರ್ಷದಿಂದ ಬದುಕು ಹಿಟ್ಟಿನಂತೆ ಮೃದುಗೊಳ್ಳಬೇಕೆಂಬ ಜೀವನ ಮೀಮಾಂಸೆಯನ್ನು ವ್ಯಕ್ತಪಡಿಸುತ್ತಾರೆ. ಶ್ರಮವನ್ನು ಹಂಚಿಕೊಂಡು ಬೀಸುವ ಪರಿಯನ್ನು ಪದಗಳಲ್ಲಿ ಕಾಣುತ್ತೆವೆ.

ಅಂದೊಳ್ಳೆ ಅಡಿಗಲ್ಲೆ ಚೆಂದೊಳ್ಳೆ ಮೇಗಲ್ಲೆ
ಚಂದ್ರಮತಿಯೆಂಬೊ ಗರತಿ(ಯ) / ಬೀಸೊಕಲ್ಲೆ
ಒಂದುಹೂಡನ ಬಾರೆ ಹಿರಿಯಕ್ಕ ! ನಾ ನಿನ್ನ
ಹಾಡಿಗೆ ದನಿಯ ಕೊಡುತೀನಿ

ಜನಪದ ಹೆಣ್ಣಿನ ಬದುಕಿನಲ್ಲಿ ವ್ಯಂಗ್ಯೋಕ್ತಿಗಳ ಜತೆ ವಸ್ತುಗಳು ಭಾವನಾತ್ಮಕ ಸಂಬಂಧವನ್ನು ಹೊಂದಿರುತ್ತಾರೆ. ದಿನವು ಹೊಟ್ಟೆಗೆ ಹಿಟ್ಟು ಮಾಡಿಕೊಡುವ ಬೀಸುವ ಕಲ್ಲಿನ ಮಹತ್ವವನ್ನು ಹೇಳಲು ಮರೆಯುವುದಿಲ್ಲ.

ತಾನು ಬೀಸುವ ಸದ್ದು ತವರವರ ತನಕ ಕೇಳಬೇಕೆಂದು ಬಯಸುತ್ತಾಳೆ. ತನ್ನ ಬದುಕಿನ ಲಯ ಹಾಡಿನ–ಪಾಡಿನ ಮೂಲಕವಾದರೂ ತನ್ನ ತವರಿನವರೆಗು ಹೋಗಲಿ ಎಂದು ಬಯಸುತ್ತಾಳೆ.

ಅಕ್ಕ ಬೀಸೋ ಕಲ್ಲೆ ಸಕ್ಕರೆ ಒಡೆಗಲ್ಲೆ
ಸೆಟ್ಟಿ ತಮ್ಮಯ್ನ ಅರಮನೆ/ ರಾಗಿ ಕಲ್ಲೆ
ಹಟ್ಟಿ ಬಾಗಿಲಿಗೆ ದನಿದೋರೆ
ಜೋಳ ಬಿಸೋ ಕಲ್ಲೆ ರಾಜಾನ ಒಡೆಗಲ್ಲೆ
ರಾಯ ಅಣ್ಣಯ್ನ ಅರಮನೆ/ ರಾಗಿ ಕಲ್ಲೆ
ರಾಜ ಬೀದಿಗೆ ದನಿದೋರೆ

ಎಂದು ಬೀಸುವ ಕಲ್ಲಿಗೆ ಭಿನ್ನಹಿಸಿಕೊಳ್ಳುವ ಬಗ್ಗೆ ಕರುಣೆಯನ್ನು ಹುಟ್ಟಿಸ ಬಲ್ಲದು ಒಂದು ಕಠಿಣವಾದ ಕಲ್ಲು ಆಕೆಯ ಕಷ್ಟಕ್ಕೆ ಕರಗಿ ಏರುಧ್ವನಿಯಲ್ಲಿ ಹೇಳೆಂದು, ಕೂಗೆಂದು, ದನಿಯ ತೋರೆಂದು ಕೇಳುವ ಬಗೆಯ ಆಕೆಯೊಳಗಿನ ಸೃಜನಾತ್ಮಕತೆಗೆ ಸಾಕ್ಷಿಯಾಗಿದೆ. ಹಾಗೆ ಬೀಸುವ ಕಲ್ಲು ತವರು ಮನೆಯವರೆಗೆ ದನಿದೊರಿದರೆ 'ನೆಲ್ಲಕ್ಕಿ ಪಡಿಯ ನಡೆಸೇನು ಬೆಲ್ಲದಾರತಿಯ ಬೆಳಗೇನು' ಎಂದು ಹೇಳುವಲ್ಲಿ ಜನಪದ ಹೆಣ್ಣಿಗೂ ಬೀಸುವ ಕಲ್ಲಿಗೂ ಇರುವ ಭಾವನಾತ್ಮಕತೆ ಎಷ್ಟೇಂದು ಅರಿಯಲು ಸಾಧ್ಯವಾಗುತ್ತದೆ.

ಅಕ್ಕ ತಂಗಿಯರು ತವರುಮನೆಗೆ ಯಾವಾಗ ಹೋದೇನು ಎಂದು ಬಯಸುತ್ತಿರುತ್ತಾರೆ. ಅದರಲ್ಲಿಯೂ ಅಣ್ಣ ತಮ್ಮಂದಿರ ಮದುವೆಯ ಸಂದರ್ಭವಾದರಂತೂ ಹೇಳತೀರದು. ಆಗ ಮುಂಬರುವ ಮದುವೆ ದಿನಗಳನ್ನೆ ಕಾಯುತ್ತಿರುವ ಹೆಣ್ಣು ಮಕ್ಕಳೆ ಜಾಸ್ತಿ. ಆದ್ದರಿಂದ ರಾಗಿ ಬೀಸುವಾಗ ಅದೇ ನೆನಪಿನಲ್ಲಿ ಬೀಸುವ ಪದಗಳನ್ನು ಕಟ್ಟಿ ಹಾಡಿದ ಹಾಡುಗಳು ನಮ್ಮ ಮಧ್ಯ ಇವೆ.

ರಾಗಿಯ ಕಲ್ಲಿಗೆ ನಾ ಮುಂದೋ ನೀ ಮುಂದೊ
ರಾಮಣ್ಣನೊಂಬೊ ಕೈ ಮುಂದೊ / ತಂಗ್ಯಮ್ಮ
ನಾ ಮುಂದು ಅಣ್ಣಯ್ನ ಮದುವೆಗೆ

ಕಾತರದಿಂದ ಕಾಯುತ್ತಿರುವ ಅಕ್ಕ ತಂಗಿಯರನ್ನ ಕರೆತರಲು ಬಂದ ಅಣ್ಣನು ಅಷ್ಟೇ ಪ್ರೀತಿಯಿಂದ ಕರೆತರುತ್ತಾನೆ. ಬಂಡಿಯ ಹೊಡಿಕೊಂಡು ಅಕ್ಕ–ತಂಗಿಯರ ಮಕ್ಕಳ ಕರದುಕೊಂಡು ಬರುವಾಗ ಬಿಸುಲು ಹೆಚ್ಚಾದಾಗ ತಾನುಟ್ಟ ಒಲೆಯ ಮುಂಜೆರಗ ಹಿಡಿದು ನೆರಳು ಮಾಡಿಕೊಂಡು ಕರೆತರುವ ಪ್ರೀತಿ ಆ ಅಭಿಮಾನ ಎಷ್ಟು ದುಡ್ಡು ಕೊಟ್ಟರು ಸಿಗದು.

ಅಕ್ಕ–ತಂಗಿಯರಿಗೆ ಬೇರೆ ಬೇರೆ ಊರುಗಳಲ್ಲಿ ವಾಸವಾಗಿದ್ದರಂತು ಹಬ್ಬ–ಹುಣ್ಣಿಮೆ, ಜಾತ್ರೆ ಸಂದರ್ಭಕ್ಕೆ ತುಂಬಾ ನೆನಪಾಗುವುದು ಹಿಗ್ಗಿದ್ದಾಗ ಬೆಳಗಿನ ತಂಪಿನ ವಾತಾವರಣದಲ್ಲಿ ತನ್ನ ಅಕ್ಕ ತಂಗಿಯನ್ನು ನೆನೆಯುವಳು. ಹಾಗೆ ಬಹಳ ದಿನಗಳ ನಂತರ ಬಂದಿರುವ ತಮ್ಮನ್ನು ಆಕ್ಷೇಪಿಸುವ ಬಗೆ ಇದು.

ಊರ ಮೇಲೆ ಊರು ದೂರೆವೇನೋ ತಮ್ಮಯ್ಯ
ಗ್ಯಾನಿಲ್ಲವೇನೋ ನನ ಮೇಲೆ / ಗೌರಿಯ
ಕಾಯ್ ಹ್ಯಾಗೆ ಒಡೆದೊ ಕಡು ಜಾಣ

ಅಣ್ಣ–ತಮ್ಮಂದಿರಿಂದ ಸಹೋದರಿ ಬಯಸುವುದು ಭಾರಿ ದೊಡ್ಡ ಆಸ್ತಿಯೆನಲ್ಲ ಅಕ್ಕ–ತಂಗಿಯರನ್ನು ತವರಿಗೆ ಕರೆತಂದರೆ ಸಾಕು. ಸ್ವರ್ಗವೇ ಭೂಮಿಗಿಳಿದಿದೆಯಂಬಂತೆ ಸಂತಸಪಡುತ್ತಾರೆ. ಕೆಲವಷ್ಟು ಊರುಗಳನ್ನು ದಾಟಿಕೊಂಡು ಬಂದರೆ ತನ್ನ ಗಂಡನ ಮನೆ ಇದೆ. ನಮ್ಮನ್ನೆಲ್ಲ ಬಿಟ್ಟು ನೀನು ಗೌರಿಹಬ್ಬ ಹೇಗೆ ಆಚರಿಸುವೆ ಎಂದು ಪ್ರಶ್ನಿಸುತ್ತಾಳೆ. ಹೆಣ್ಣು ಮಕ್ಕಳಿಗೆ ತರುಮನೆಯಲ್ಲಿ ಬಡತನವಿದ್ದರೂ ಸರಿಯೇ ಅಲ್ಲಿರುವ ಸಂಬಂಧಗಳ ಬಂಧಗಳ ಶ್ರೀಮಂತಿಕೆಯನ್ನು ಕಾಣುವ ಗಟ್ಟಿ ಸಂಬಂಧದ ಕಣ್ಣು ಅದು. ದೂರದ ಸೀಮೆಯ ಅಕ್ಕ ಹೇಗಿರುವಳೊ ಎಂದು ನೆನೆದು ಬೀಸುವ ಕಾಯಕದಲ್ಲಿ ಮುಳುಗುವ ತಂಗಿ ದೊರದಲ್ಲಿರುವವಳು ಸುಖವಾಗಿರುವಳೆಂಬ ದೈರ್ಯವನ್ನು ತಗೆದುಕೊಂಡು ಬದುಕುತ್ತಿದ್ದೇನೆ ಎನ್ನುತ್ತಾಳೆ. ದೂರದ ಸೀಮೆಗೆ ನಾರಿ ನಾನೊಬ್ಬಳೆ ಧೀರೈಸನಾರೆ ದಿನಗಳ / ತಮ್ಮಯ್ಯ ಧೀರ್ಯಾಮದು ದೊರೆಯೆ ಮೊಗದೋರೋ ಎಂದು ತನ್ನ ಆತಂಕವನ್ನು ವ್ಯಕ್ತಪಡಿಸುತ್ತಾಳೆ.

ಅಟ್ಟ ಕೆ ಏಣ್ಯಸೆ ಬೆಟ್ಟ ಕೆ ಬಿದಿರಾಸೆ
ಹೆಣ್ಣು ಮಕ್ಕಳಿಗೆ ತವರಾಸೆ
ಪಾರಿವಾಣದ್ ಹಕ್ಕಿ ಏನಾಸೇಲಿದ್ದಾವೋ
ನೀರಾಸೆ ಮರದ ನೆರಳಾಸೆ / ಹೆಣ್ಣು ಮಕ್ಕಳಿಗೆ
ತಾಯಾಸೆ ತೌರ ಮನೆಯಾಸೆ / ನನ್ನವ್ವಾ

ನಿನ್ನಾನೆ ನನ್ನ ಬಿಡದಲ್ಲೆ / ನನ್ನವ್ವಾ
ನೀ ಬಿಟ್ಟರು ನಿನ್ನ ಮನೆಬಿಡದು / ನನ್ನವ್ವಾ
ಮಳೆ ಬಿಡದು ಮರದ ಹನಿ ಬಿಡದು

ಹೀಗೆ ಗಂಡನ ಮನೆಗೆ ಬಂದು ಬಾಳಿ ಬದುಕುವ ಹೆಣ್ಣಿಗೆ ಯೌವನದಿಂದ ವೃದ್ಧಾಪ್ಯದವರೆಗೂ ತವರಿನ ಹಂಬಲ ಬಿಡದು. ಒಂದು ಹಕ್ಕಿಗೆ ಬೇಕಾಗಿರುವುದು ತಾನು ಬದುಕಲು ಬೇಕಿರುವುದು ಕುಡಿಯಲು ನೀರು, ಆಹಾರ, ಇರಲು ಗೂಡು. ಹಾಗೆ ಹೆಣ್ಣಿಗೂ ತನ್ನ ಬಾಲ್ಯ ಕಳೆದ ಆ ಗೂಡಿನ ನೆನಪು ಅಷ್ಟು ಸುಲಭವಾಗಿ ಹೋಗುವಂತಹುದಲ್ಲ. ಮಳೆಯಾದ ನಂತರ ಮರದ ಹನಿ ಹೇಗೆ ಮಳೆಯ ನೆನಪು ನೀಡುತ್ತದೆಯೋ ಅದೇ ರೀತಿ ಹೆಣ್ಣಿಗೆ ತವರು ಮನೆಯ ನೆನಪುಗಳು ಕಾಡುತ್ತವೆ. ಕಾಡಿದ ನೆನಪುಗಳನ್ನು ಬೀಸುವ ಕಲ್ಲಿನ ಮುಂದೆ ತನ್ನ ನೋವನ್ನು ತೊಡಿಕೊಳ್ಳುತ್ತಾಳೆ.

ಹೆಣ್ಣಿಗೆ ತವರುಮನೆಯ ಕೊಡುಗೆ–ಉಡುಗೆ ಎಂದರೆ ಮಹಾಪ್ರೀತಿ ಅಣ್ಣ–ತಮ್ಮಂದಿರನ್ನು, ತಂದೆಯನ್ನು ಕಾಡಿಬೇಡಿ ತನ್ನಿಚ್ಛೆ ವಸ್ತುವನ್ನು ಪಡೆದು ಖುಷಿ ಪಡುತ್ತಾಳೆ. ತನ್ನ ಗಂಡನ ಮನೆಯಲ್ಲಿ ಸಿರಿವಂತರಿದ್ದರೂ ತವರು ಮನೆಯಿಂದ ತೆಗೆದುಕೊಂಡ ಹೋದ ವಸ್ತು, ಬೆಲೆ ಚಿಕ್ಕದಿದ್ದರೂ ಜನಪದ ಹೆಣ್ಣು ಅದಕ್ಕೆ ಬೆಲೆ ಕಟ್ಟುವುದಿಲ್ಲ. ಅದು ಅಲ್ಲದೆ ತವರು ಮನೆಯಿಂದ ಏನನ್ನು ತೆಗೆದುಕೊಂಡು ಹೋಗದಿದ್ದರೆ ನಾಲ್ಕು ಜನ ಆಡಿಕೊಳ್ಳುತ್ತಾರೆ ಎಂದು ಹೇಳುತ್ತಾಳೆ.

ಕಾಡಾಕೆ ಬೇಡಾಕೆ ಕಾಡ ಗೊಲ್ಲರೇನೊ
ನಾಡ ಮೇಗಲ ನಡತೇಯ ನಡೆಯದಿದ್ರೆ
ಆಡಿಕೊಂಬೋರು ಜನರೆಲ್ಲ

ಎಂದು ಲೋಕನಿಂದೆಗೆ ಗುರಿಯೋಗ ಬಯಸದ ಜನಪದ ಹೆಣ್ಣು ತವರು ಮನೆಯಿಂದ ಏನನ್ನಾದರೂ ತೆಗೆದುಕೊಂಡು ಹೊಗದಿದ್ದರೆ ತನ್ನ ಸರಿಕರು ಅಕ್ಕ ಪಕ್ಕದವರು ತನ್ನ ಗಂಡನ ಮನೆಯವರು ಆಡಿಕೊಳ್ಳುವಂತಾಗುತ್ತದೆ ಎಂದು ಅಲ್ಲದೆ ತವರು ಮನೆಯವರಿಗೆ ಯಾರೂ ಏನ್ನನ್ನಾದರೊ ಅನ್ನುವುದನ್ನು ಹೆಣ್ಣು ಸಹಿಸುವುದಿಲ್ಲ. ಹೀಗೆ ಅಣ್ಣ–ತಂಗಿಯರ ಬಾಂಧ್ಯವ್ಯವನ್ನು ಕಾಣುತ್ತೇವೆ. ತಂಗಿ ಅಣ್ಣನಿಗೆ ಎಮ್ಮೆ ಕೊಡುವಂತೆ ಕೇಳುತ್ತಾಳೆ. ನಿನ್ನ ಹೆಸರ ಹೇಳಿ ಮೊಸರನ್ನ ಮಾಡುವೆ ಎನ್ನುವಾಗ ಅಣ್ಣ ಹೇಳುತ್ತಾನೆ. ಮೈತುಂಬ ಬಂಗಾರ ಹಾಕಿಕೊಂಡು ಒಳ್ಳೆಯ ಸುಶಿಕ್ಷಿತ, ಸಿರಿವಂತರ ಕುಟುಂಬವಾದರು ಸರಿ ಎಮ್ಮೆಯನ್ನು ಹೊಡೆದು ಕಳುಹಿಸುವೆ ಎಂದು ಹೇಳುತ್ತಾನೆ. ಇದರಿಂದ ಹೆಣ್ಣಿಗೆ ಆತ್ಮ ವಿಶ್ವಾಸ ಮತ್ತು ಆರ್ಥಿಕ, ಆರೋಗ್ಯ ಸುಸ್ಥಿತಿಯಲ್ಲಿರಲು ಸಾಧ್ಯವಾಗುತ್ತದೆ. ಆದ್ದರಿಂದ ತಂಗಿಯ ಮಾತಿಗೆ ಇಲ್ಲವೆನ್ನದೇ ಕೊರಳಲ್ಲಿ ಸರಮುತ್ತುಗಳು ಹೊಳೆದಂತೆ ಕೈಯಲ್ಲಿ ಕಡಗೋಲ ಇರಲಿ ಎಂದು ಬಯಸಿ ಎಮ್ಮೆಯನ್ನು ಬಳುವಳಿಯಾಗಿ ಕಳುಹಿಸುವ ಸಂಪ್ರದಾಯವು ನಮ್ಮ ಗ್ರಾಮ್ಯ ಜನಪದರಲ್ಲಿ ರೂಢಿಯಿರುವ ಪದ್ಧತಿಯಾಗಿದೆ.

ಸುವ್ವೆಂದರೆ ನುರಿದಾದೆ ಸುಪ್ಪೆಂದರೆ ನುರಿದಾವೆ
ಆನೆಯ ಪಾದಕೆ ನುರಿದಾವೆ / ಬತ್ತವ
ಯಾವಣ್ಣ ಬಿತ್ತಿ ಬೆಳೆದನೆ

ಬೀಸುವ ಕುಟ್ಟುವ ಕ್ರಿಯೆ ತುಂಬಾ ಸರಳವಾದುದೇನಲ್ಲ. ಪ್ರತಿ ದಿನ ಬೆಳಗಿನ ಜಾವ ದೈಹಿಕ ಶ್ರಮವಹಿಸಿ ಬೀಸುವ ಕಾರ್ಯಕ್ಕೆ ಸಜ್ಜುಗೊಳ್ಳುವುದೆಂದರೆ ಸಾಮಾನ್ಯವೆ. ಹೀಗಾಗಿ ಕಾಳುಗಳು ಬೀಸುವಾಗ ತುಂಬಾ ಕಾಠಿಣ್ಯವನ್ನು ಹೊಂದಿದಾಗ ಇಂಥ ಶ್ರಮದಾಯಕ ಮಾತುಗಳನ್ನು ಹಾಡಾಗಿ ಹಾಡಿ ತನ್ನ ದಣಿವನ್ನು ಮರೆಯುವ ಕ್ರಿಯೆ ಅದ್ಭುತವಾದುದು. ಯಾವುದೇ ಕೆಲಸವಿರಲಿ ಜನಪದರು ಹಿಂಜರಿಯುವುದಿಲ್ಲ. ಕೆಲಸದ ವಿಷಯದಲ್ಲಿ ರಾಜಿಯಾಗುವ ಮಾತೆ ಇಲ್ಲ. ತನ್ನ ಪಾಲಿನ ಕೆಲಸವಲ್ಲದೇ ಇಡೀ ಕುಟುಂಬದವರ ಬೇಕು ಬೇಡಗಳ ಬಗೆಗೆ ಆಕೆಯ ಗಮನ ಇರಲೇ ಬೇಕು. ಹೀಗಾಗಿ ಆಕೆ ಕೆಲಸವನ್ನು ಶ್ರಮವನ್ನು ಹಾಡಿನ ರಾಗದಂತೆ ಸರಾಗವಾಗಿ ಮಾಡಿ ಮುಗಿಸುವುದು ಹೆಣ್ಣಿನ ಜಾಯಮಾನ.

ಭಾಷಿಕತೆ : ಬೀಸುವ ಗಾಳಿಯಲ್ಲಿ ಹೆಚ್ಚಾಗಿ ಆಯಾ ಪ್ರದೇಶದ ಗ್ರಾಮ್ಯಭಾಷೆಯ ಪ್ರಭಾವವಿರುವುದನ್ನು ಸಹಜವಾಗಿಯೇ ಕಾಣುತ್ತೇವೆ. ಪ್ರಾದೇಶಿಕತೆಯ ವಿಶಿಷ್ಟ ಪದ ಪ್ರಯೋಗಗಳನ್ನು ಬಳಸಿಕೊಂಡು ಪದ ರಚನೆಯಾಗಿರುವುದನ್ನು ನೋಡುತ್ತೇವೆ. ಸಾಮಾನ್ಯವಾಗಿ ಬೀಸುವ ಕಲ್ಲಿನ ಪದಗಳು ತ್ರಿಪದಿ ಪ್ರಕಾರಗಳಲ್ಲಿದ್ದು ಎಷ್ಟೋ ಕಡೆ ತ್ರಿಪದಿ ಮೂರು ಸಾಲುಗಳಿಗೆ ನಿಲ್ಲದೇ ಮುಂದುವರಿಯುತ್ತಾ ಹೋಗುತ್ತದೆ. ಮಾತುಗಳನ್ನು ಒಂದೊಂದಾಗಿ ಸೇರಿಸಿಕೊಳ್ಳುತ್ತಾ ಪ್ರತಿ ಸಾಲನ್ನು ಎರಡೆರಡೂ ಸಲ ಹೇಳುತ್ತಾರೆ. ಈ ಪದಗಳೆಲ್ಲವು ತ್ರಿಪದಿ ಪ್ರಕಾರದಲ್ಲಿದ್ದರೂ ಒಂದೇ ತರೆನಾಗಿ ಹಾಡುವುದಿಲ್ಲ. ಬೇರೆ ಬೇರೆ ರಾಗಗಳಲ್ಲಿ ಹಾಡುತ್ತಾರೆ. ಇದರಿಂದ ಏಕತಾನತೆ ಇಲ್ಲದೆ ವೈವಿಧ್ಯಮಯ ದಾಟಿಯಲ್ಲಿ ಹಾಡು ಕೇಳಲು ಹಿತವಾಗಿರುತ್ತದೆ.

ಮುಂಜಾನೆ ನಸುಗೆಂಪಿನ ವಾತಾವರಣದಲ್ಲಿ ಮೂಡಿ ಬರುತ್ತಿರುವ ಗರಗರ ಶಬ್ದದೊಂದಿಗೆ ಸರಕ್ ಸರಕ್ ಎನ್ನುವ ಬಳೆಗಳು ಹೊಮ್ಮಿಸುವ ಆ ಶೃತಿ ನೀರವಮೌನವನ್ನು ಬೇಧಿಸುತ್ತಿದ್ದವು. ಇಂದು ಈ ಬಗೆಯ ಕಣ್ಮರೆಯಾಗಿ ಎಲ್ಲ ಗುಡಿಗಳಲ್ಲಿ ಬೈಪ್ಸರಿಕಾರ್ಡಿನ

ಹಾಡುಗಳು ಕೇಳುತ್ತವೆ. ಬೀಸುವ ಕಲ್ಲಿನ ಸದ್ದು ಅವುಗಳೊಂದಿಗೆ ಒಡಮೂಡುತ್ತಿದ್ದ ಸುಮಧುರವಾದ ಹಾಡುಗಳು ಮರೆಯಾಗಿವೆ. ಆಧುನಿಕ ಜಾಗತೀಕರಣ ಹಳ್ಳಿ ಹಳ್ಳಿಗೂ ತನ್ನ ಬಾಹುಗಳ ಚಾಚಿ ಮಿಕ್ಸಿ, ಗ್ರೈಂಡರ್, ಹಿಟ್ಟಿನ ಗಿರಣಿಗಳ ಸದ್ದು ಅಬ್ಬರಿಸುತ್ತಿವೆ. ಆಧುನಿಕ ಉಪಕರಣಗಳ ಬಳಕೆಯಲ್ಲಿ ಕಳೆದು ಹೋದ ಬೀಸುವ ಕಲ್ಲಿನ ಹಾಡುಗಳ ಹುಡುಕಾಟ ನಡೆಯುತ್ತಿದೆ. ಲಿಖಿತ ರೂಪದಲ್ಲಿ ಹಿಡಿದಿಡುವ ಕಾರ್ಯ ನಡೆದರೂ ಅವುಗಳ ಹಾಡಿನ ರಾಗಗಳ ಮೂಲಕ ದಾಖಲಿಸುವ ಪ್ರಯತ್ನವು ಅಕಾಡಮುಕ್ ವಲಯದಲ್ಲಿ ಹೆಚ್ಚಿನ ಮಟ್ಟದಲ್ಲಿ ಇನ್ನೂ ಕಾರ್ಯವಾಗಬೇಕಿದೆ. ಇಂಥ ಹಾಡುಗಳಲ್ಲಿ ಕೌಟುಂಬಿಕ ವ್ಯವಸ್ಥೆಯಲ್ಲಿ ಮಾನವ ಸಂಬಂಧಗಳ ಹುಡುಕಾಟ–ತಡಕಾಟ, ತಲ್ಲಣ, ಕಾತರ ಎಲ್ಲವು ಮೆಳೈಸಿ ಬದುಕನ್ನು ಅರಿಯುವಂತೆ ಮಾಡುವ ಜೀವನ ನಿದರ್ಶನಗಳಾಗಿವೆ.

ಆಕರ ಗ್ರಂಥಗಳು

1. ಜಾನಪದ ವ್ಯಾಸಂಗ– ಡಾ.ಬಸವರಾಜ ಪೋಲಿಸ್ ಪಾಟೀಲ್, ಅಮರ ಪ್ರಕಾಶನ ಗುಲ್ಬರ್ಗ, ವರ್ಷ: 1998
2. ಜಾನಪದ ಸಿಂಗಾರ– ಡಾ. ಎಚ್.ಟಿ.ಪೋತೆ, ಕುಮಾರ–ಪೂರ್ಣಿಮಾ ಪ್ರಕಾಶನ ರಾಯಚೂರು, ವರ್ಷ:2001
3. ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು: ಲೇ–ಡಾ.ನಿಂಗಣ್ಣ ಸಣ್ಣಕ್ಕಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು. ವರ್ಷ:2003
4.ಸೋ.. ಅನ್ನಿರೇ, ಸಂ– ಎಂ.ಟಿ.ಶ್ವೇತಾ, ಗಾಯತ್ರಿ ಪ್ರಕಾಶನ ಬಳ್ಳಾರಿ, ವರ್ಷ: 2014
5. ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ, ಲೇ– ಡಾ. ಎಸ್.ಎಂ. ಮುತ್ತಯ್ಯ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ವರ್ಷ:2008
6.ಜನತಾ ಗೀತೆಗಳು, ಲೇ: ಡಾ.ಟಿ.ಎಸ್. ಗದ್ದಗಿಮ್ಮಠ, ಸರ್ಪನ್ ಪ್ರಕಾಶನ್ ಧಾರವಾಡ, ವರ್ಷ:1956
7. ಜನಪದ ಖಂಡಕಾವ್ಯಗಳು, ಲೇ–ಡಾ.ನಿಂಗಪ್ಪ ಮುದೇನೂರು, ಸಮತಾ ಪ್ರಕಾಶನ ಹರಪನಹಳ್ಳಿ, ವರ್ಷ: 2004
8. ಜನಪದ ಕಲೆ ಸಂಸ್ಕೃತಿ, ಲೇ– ಡಾ.ಎಚ್.ಟಿ.ಪೋತೆ, ಕುಟುಂಬ ಪ್ರಕಾಶನ ಗುಲ್ಬರ್ಗ, ವರ್ಷ: 2012
9.ಆಯ್ದ ಗಾದೆಗಳು ಹಾಗೂ ಒಗಟುಗಳು, ಸಂ–ವೀರಣ್ಣ ದಂಡೆ, ಕವಿಮಾರ್ಗ ಪ್ರಕಾಶನ ಕಲಬುರ್ಗಿ, ವರ್ಷ: 1985